

# ಒಡವೆಗೆ ರೂಪ ಕೊಡುವ ಡೈಪೀಸ್

ಚಿನ್ನದಾಭರಣ ಮಹಿಳೆಯರ ಮೆಚ್ಚು. ಚಿನ್ನದ ನೆಕ್ಲೆಸ್, ಕಿವಿಯೋಲೆ, ಹಾರ ಮುಂತಾದ ಆಭರಣ ತಯಾರಿಸುವಾಗ ಮೊದಲು ಚಿಕ್ಕ ಚಿಕ್ಕ ಭಾಗಗಳನ್ನು ಮಾಡಿ ನಂತರ ಅದಕ್ಕೆ ಬೇಕಾದ ಆಕಾರ ನೀಡಿ ಆಭರಣದ ಸುಂದರ ರೂಪ ಕೊಡುತ್ತಾರೆ. ಒಡವೆಯ ಚಿಕ್ಕ ಚಿಕ್ಕ ಭಾಗಗಳಿಂದ ದೊಡ್ಡ ಚಿನ್ನದ ನೆಕ್ಲೆಸ್, ಹಾರಗಳನ್ನು ತಯಾರಿಸಲಾಗುತ್ತದೆ.



ಒಂದೇ ಹಾಗಿರುವ ಚಿಕ್ಕ ಪೀಸ್‌ಗಳಿಗೆ ಚಿನ್ನದ ವರ್ತಕರ ಪರಿಭಾಷೆಯಲ್ಲಿ ಡೈ ಪೀಸ್ ಎಂದು ಹೆಸರು. ಈ ಡೈಪೀಸ್‌ಗಳನ್ನು ಒಂದಕ್ಕೊಂದು ಜೋಡಿಸಿ ನೆಕ್ಲೇಸ್ ಮಾಡುತ್ತಾರೆ. ಕೈಯಲ್ಲಿ ಮಾಡಿದರೆ ಅದು ದೀರ್ಘ ಸಮಯ ತೆಗೆದುಕೊಳ್ಳುತ್ತದೆ. ಅದಕ್ಕೆ ಈಗ ಮೆಶಿನ್‌ಗಳ ಮೊರೆ ಹೋಗುತ್ತಾರೆ. ಇದಕ್ಕೆ ಸಮಯ ಕಡಿಮೆ ಸಾಕಾಗುತ್ತದೆ.

ಚಿನ್ನದ ಕೆಲಸ ಮಾಡುವ ಫ್ಯಾಕ್ಟರಿಗಳಲ್ಲಿ ಈ ಮೆಶಿನ್‌ಗಳ ಮೂಲಕ ಕೆಲಸ ಮಾಡಲು ನುರಿತ ಕೆಲವೇ ಜನರು ಸಾಕು. ಉಳಿದೆಲ್ಲಾ ಕೆಲಸ ಕಾರ್ಯಗಳನ್ನು ಮೆಶಿನ್ ಮಾಡುತ್ತದೆ. ಮೊದಲಿಗೆ ಬೆಳ್ಳಿ ಅಥವಾ ತಾಮ್ರದ ಒಂದು ಅಚ್ಚನ್ನು ಮಾಡಿ ಅದನ್ನು ರಬ್ಬರ್ ಮೋಲ್ಡ್ ಅಥವಾ ಸಿಲಿಕಾನ್ ಮೋಲ್ಡ್‌ನಲ್ಲಿ ಇಟ್ಟು ವಾಲ್ಕೆನೈಜರ್‌ನ ಮೂಲಕ ಇದರಲ್ಲಿ ಅಚ್ಚನ್ನು ತಯಾರಿಸಬೇಕು. ಅನಂತರ ಅದರೊಳಗಿನಿಂದ ತಾಮ್ರದ ಅಚ್ಚನ್ನು ತೆಗೆದಾಗ ಅಲ್ಲಿ ಅದೇ ರೀತಿ ಅಚ್ಚು ಬಂದಿರುತ್ತದೆ. ಕಂಪ್ಯೂಟರ್ ಆ್ಯಡೆಡ್ ಡಿಸೈನ್ ಮತ್ತು ಕಂಪ್ಯೂಟರ್ ಆ್ಯಡೆಡ್ ಮಾಡೆಲ್ ಮೇಕರ್ ಅನಂತರ ವ್ಯಾಕ್ಸ್ ಮೆಷಿನ್‌ನ ಮೂಲಕ ಅದರೊಳಗೆ ವ್ಯಾಕ್ಸ್ ತುಂಬಿಸಬೇಕು.

ಹೀಗೆ 10, 15 ವ್ಯಾಕ್ಸ್‌ನ ಆಕೃತಿಗಳನ್ನು ತಯಾರಿಸಬೇಕು. ಅಂದರೆ ಈ ಮೋಲ್ಡ್ ವ್ಯಾಕ್ಸ್ ತುಂಬಿಸಿ ಸ್ವಲ್ಪ ಹೊತ್ತಿನಲ್ಲೇ ಅದರಿಂದ ವ್ಯಾಕ್ಸ್‌ನ ಆಕೃತಿಗಳು ತೆಗೆಯಲು ಬರುತ್ತವೆ. ಅಲ್ಲಿಗೆ ಬಿಸಿ ಚಿನ್ನದ ದ್ರಾವಣ ತುಂಬಿಸಿದಾಗ ಅಲ್ಲಿ ಚಿನ್ನದ ಪೀಸ್‌ಗಳನ್ನು ಹೊಂದಿದ ಟ್ರೀ ಉಂಟಾಗುತ್ತದೆ ಅನಂತರ ಅದನ್ನು ಪ್ರತ್ಯೇಕಗೊಳಿಸಲಾಗುತ್ತದೆ. ಹೀಗೆಯೇ 10 ಹಲವು ಪೀಸ್‌ಗಳನ್ನು ಒಟ್ಟಿಗೆ ತಯಾರಿಸಲಾಗುತ್ತದೆ. ಇದು ಸಮಯವನ್ನು ಉಳಿಸುತ್ತದೆ.

ಇದೇ ರೀತಿ ಕೇರಳದ ಆಭರಣ, ಕಾಸಿನ ಸರ, ಬಳೆಗಳನ್ನೂ ತಯಾರಿಸಲಾಗುತ್ತದೆ. ಆದರೆ ಅಚ್ಚು ಸರಿಯಾಗಿರಬೇಕು, ಅಳತೆಯು ಸರಿಯಾಗಿದ್ದರೆ ತಯಾರು ಮಾಡಿದ ಎಲ್ಲಾ ಪೀಸ್‌ಗಳು ಅದೇ ರೀತಿ ಬಂದು ಬಿಡುತ್ತವೆ. ಅಲ್ಲದೆ ವ್ಯಾಕ್ಸ್ ಅಚ್ಚನ್ನು ಕರಗಿಸಲು ಇಡುವ ವೈಬ್ರೇಟರ ಅನ್ನು ಸರಿಯಾಗಿ ಬಳಸಿ ಪೂರ್ತಿಯಾಗಿ ಅಂದರೆ ಒಂದು ಚೂರು ಭಾಗವೂ ಉಳಿಯದಂತೆ ಇನ್ವೆಸ್ಮೆಂಟ್ ಪೌಡರನ್ನು ಗಟ್ಟಿಯಾಗಿ ತುಂಬಿಸಬೇಕು. ಆಕೃತಿ ಸಂಪೂರ್ಣವಾಗಿ ಪುಡಿಯಿಂದ ಮುಚ್ಚಿರಬೇಕು. ಯಾಕೆಂದರೆ ಸ್ವಲ್ಪ ಜಾಗ ಬಾಕಿಯಾದರೂ ಅಲ್ಲಿ ಚಿನ್ನದ ದ್ರಾವಣ ಎರೆದಾಗ ಖಾಲಿ ಇದ್ದ ಜಾಗದಲ್ಲಿ ಹೋಗಿ ಸೇರಿಕೊಂಡು ಆಕೃತಿ ವಿಕೃತ ರೂಪವನ್ನು ತಾಳಬಹುದು. ಕೈಯಲ್ಲಿ ಕೆಲಸ ಮಾಡುವಾಗ ನಮಗೆ ಕಣ್ಣಿಗೆ ಕಾಣಿಸಿಕೊಂಡು ಮಾಡುತ್ತೇವೆ. ಆದರೆ ಮೆಶಿನ್‌ನಲ್ಲಿ (ಯಂತ್ರ) ವಸ್ತು ಹೊರಬಂದಾಗಲೇ ಅದರ ರೂಪ ತಿಳಿಯುವುದರಿಂದ ಜಾಗ್ರತೆ ವಹಿಸಬೇಕು. ಏಕೆಂದರೆ ಅದು ಬೇಗನೆ ಗಟ್ಟಿಯಾಗಿರುತ್ತದೆ. ಆಗ ವ್ಯಾಕ್ಸ್ ಆಕೃತಿಗಳು ಸರಿಯಾಗಿದೆಯೇ ಎಂದು ನೋಡಿಕೊಂಡೇ ಚಿನ್ನದ ಆಕೃತಿಗಳನ್ನು ಮಾಡಬೇಕು. ಆಗ ಬಂದಂತಹ ಆಭರಣ ನೈಜ ಚಿತ್ರಣ ನೀಡುತ್ತದೆ.

ಒಂದು ಚೂಡಿ, ಬ್ಲೌಸ್, ಶರ್ಟ್ ಅನ್ನು ನಮಗೆ ಬೇಕಾದಂತೆ ಹೊಲಿದಾಗ ಮಾತ್ರ ಅದನ್ನು ಧರಿಸಲು ಸಾಧ್ಯವಾಗುತ್ತದೆ. ಅದು ಪ್ಯಾಟರ್ನ್ ಬ್ಲೌಸ್ ಆದರೆ ಅದರ ಹೊಲಿಗೆ ಮಜೂರಿ ಇನ್ನೂ ಹೆಚ್ಚು. ಹಾಗೆಯೇ ಗಟ್ಟಿ ಚಿನ್ನವನ್ನು ಬಟ್ಟೆಗೆ ಹೋಲಿಸಿದಂತೆ ಆಭರಣಕ್ಕೆ ಚೂಡಿ ಬ್ಲೌಸನ್ನು ಹೋಲಿಸಬಹುದು. ಹೊಲಿದ ಬಟ್ಟೆಗೆ ಹೊಲಿಗೆ ಮಜೂರಿ ಕೊಡುವಂತೆಯೇ ಆಭರಣಕ್ಕೆ ಮೇಕಿಂಕ್ ಚಾರ್ಜ್ ಸಿಗುವುದು. ಚಿನ್ನ ಹಳತಾದಾಗ ಅದರ, ಕಲ್ಲು ಮೇಕಿಂಗ್ ಚಾರ್ಜನ್ನು ಹೊರತುಪಡಿಸಿ ಚಿನ್ನದ ಮೌಲ್ಯ ಪುನಃ ಗ್ರಾಹಕರಿಗೆ ಸಿಗುತ್ತದೆ.

ಫ್ಯಾಷನೆಬಲ್ ಆಭರಣ ತಯಾರಿಕೆಗೂ ಡೈಪೀಸ್‌ಗಳು ಬೇಕು. ಹೀಗೆ ಫ್ಯಾಷನ್ ಜಗತ್ತಿನಲ್ಲಿ ಆಭರಣದ ಡೈಪೀಸ್ ಕೂಡ ಮಹತ್ವದ ಸ್ಥಾನ ಪಡೆದಿದೆ.

■ ಕೃಷ್ಣವೇಣಿ ಪ್ರಸಾದ್ ಮುಳಿಯ